**1 ನೇ ಹೆಚ್ಚುವರಿ ವಿಶೇಷ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಚಿಕ್ಕಮಗಳೂರು**

**<u>ಸತ್ರ ಮೊಕದ್ದಮೆ ನಂಃ 43/2024</u>**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಕುಮಾರ | ಪಿಡಬ್ಲ್ಯೂ. 11 |
| ತಂದೆಯ ಹೆಸರು | - | ಮಲ್ಲಪ್ಪ | ಸಿ.ಡಬ್ಲ್ಯೂ20 |
| ವಯಸ್ಸು | - | 43 ವರ್ಷ | |
| ಉದ್ಯೋಗ | - | ಸಹಾಯಕ ಆರಕ್ಷಕ ಉಪನಿರೀಕ್ಷಕ, ಸಖರಾಯಪಟ್ಟಣ ಪೊಲೀಸ್ ಠಾಣೆ | |
| ವಾಸ ಸ್ಥಳ | - | ಸಖರಾಯಪಟ್ಟಣ | |

ದಿನಾಂಕಃ 07-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

1. ನಾನು ಕಳೆದ 3 ವರೆ ವರ್ಷಗಳಿಂದ ಸಖರಾಯಪಟ್ಟಣ ಪೊಲೀಸ್ ಠಾಣೆಯಲ್ಲಿ ಸಹಾಯಕ ಆರಕ್ಷಕ ಉಪನಿರೀಕ್ಷಕನಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕಃ 22-02-2023 ರಂದು ಬೆಳಿಗ್ಗೆ 6 ಗಂಟೆಗೆ ಚಾಸಾ.21 ರವರು ನನಗೆ ಫೋನ್ ಮಾಡಿ ಬೆಂಗಳೂರಿನ ಸ್ಪರ್ಶ ಆಸ್ಪತ್ರೆಯಲ್ಲಿ ಗಣೇಶಗೌಡ ಎಂಬುವವರು ಹಲ್ಲೆಯ ಹಿನ್ನಲೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ ನೀವು ಅಲ್ಲಿಗೆ ಹೋಗಿ ಅವರ ಹೇಳಿಕೆಯನ್ನು ಪಡೆದುಕೊಂಡು ಬರುವಂತೆ ಸೂಚಿಸಿದ್ದರು.

3. ಅದರಂತೆ ನಾನು ಅದೇ ದಿನ ಮಧ್ಯಾಹ್ನ 2 ಗಂಟೆಗೆ

ಬೆಂಗಳೂರನ್ನು ತಲುಪಿ ಸ್ಪರ್ಶ ಆಸ್ಪತ್ರೆಯ ಸಮೀಪವಿದ್ದ ಆರ್.ಎಂ.ಸಿ. ಯಾರ್ಡ್ ಪೊಲೀಸ್ ಠಾಣೆಗೆ ಭೇಟಿ ನೀಡಿ ಎಂ.ಎಲ್.ಸಿ. ಮಾಹಿತಿಯನ್ನು ಪಡೆದು ಅಲ್ಲಿಂದ ಸ್ಪರ್ಶ ಆಸ್ಪತ್ರೆಗೆ ಭೇಟಿ ನೀಡಿ ಸದರಿ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದ ಗಾಯಾಳು ಚಾಸಾ.1 ಗಣೇಶಗೌಡರವರ ಹೇಳಿಕೆಯನ್ನು ಸಂಜೆ 4 ಗಂಟೆಯಿಂದ 5 ಗಂಟೆಯವರೆಗೆ ಪಡೆದುಕೊಂಡು ರಾತ್ರಿ 11 ಗಂಟೆಗೆ ಠಾಣೆಗೆ ಹಿಂದಿರುಗಿ ಆಗ್ಗೆ ಠಾಣಾಧಿಕಾರಿಯಾಗಿದ್ದ ಚಾಸಾ.19 ರವರಿಗೆ ಸದರಿ ಹೇಳಿಕೆಯನ್ನು ಮುಂದಿನ ಕ್ರಮಕ್ಕಾಗಿ ನೀಡಿದ್ದೆನು.

4. ಸಾಕ್ಷಿಯು ಸದರಿ ಎಂ.ಎಲ್.ಸಿ. ಮಾಹಿತಿಯನ್ನು ಮತ್ತು ಅದರಲ್ಲಿರುವ ತನ್ನ ಸ್ವೀಕೃತಿ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಎಂ.ಎಲ್.ಸಿ. ಯನ್ನು ನಿಪಿ.19 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.19(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಸದರಿ ಹೇಳಿಕೆಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಹೇಳಿಕೆಯನ್ನು ನಿಪಿ.20 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.20(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಐ.ಎಸ್.ಟಿ. ವಕೀಲರಿಂದಃ -

5. ನೀವು ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ಹೋಗಬೇಕಾದರೆ ನಿಮಗೆ ಪಾಸ್ ಪೋರ್ಟ ನೀಡಲಾಗುತ್ತದೆ

ಎಂದರೆ ಸಾಕ್ಷಿ ನಾನು ಎ ಎಸ್ ಐ ಆಗಿದ್ದ ಕಾರಣ ನನಗೆ ಬಸ್ಸಿನಲ್ಲಿ ಪ್ರಯಾಣಿಸಲು ವಾರೆಂಟ್ ನ್ನು ನೀಡಲಾಗಿತ್ತು ಎನ್ನುತ್ತಾರೆ. ನಿಪಿ.19 ನ್ನು ನಾನು ಬೆಂಗಳೂರಿನ ಆರ್.ಎಂ.ಸಿ ಯಾರ್ಡ ಪೊಲೀಸ್ ಠಾಣೆಯಲ್ಲಿ ಪಡೆದುಕೊಂಡಿದ್ದೆನು. ಸದರಿ ದಾಖಲೆಯನ್ನು ಯಾರಿಗೆ ನಿವೇದಿಸಿಕೊಳ್ಳಲಾಗಿದೆ ಎನ್ನುವ ಕಡೆ ಖಾಲಿ ಬಿಡಲಾಗಿದೆ ಎಂದರೆ ಸರಿ. ಸದರಿ ದಾಖಲೆಯನ್ನು ಯಾರು, ಯಾವಾಗ ಪಡೆದುಕೊಂಡರು ಎನ್ನುವ ಕಡೆ ಖಾಲಿ ಬಿಡಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದರ ಹಿಂಭಾಗದಲ್ಲಿ ಆರ್.ಎಂ.ಸಿ ಯಾರ್ಡ ಪೊಲೀಸರ ಸೀಲ್ ಮತ್ತು ಸಹಿ ಇದೆ ಎನ್ನುತ್ತಾರೆ. ನೀವು ಚಾಸಾ.1 ರವರ ಹೇಳಿಕೆಯನ್ನು ಪಡೆದುಕೊಂಡಿದ್ದಾಗಿ ಹೇಳಿದ್ದೀರಿ ಅದರ ಪೂರ್ವದಲ್ಲಿ ಆತ ಹೇಳಿಕೆಯನ್ನು ಕೊಡುವ ಸ್ದಿ.ತಿಯಲ್ಲಿ ಇದ್ದರೇ ಇಲ್ಲವೇ ಎಂದು ವೈದ್ಯರಿಂದ ಖಾತ್ರಿ ಪಡಿಸಿಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಪಿ.19 ನ್ನು ನೀವು ಸ್ವೀಕರಿಸಿದ ಬಳಿಕ ವೈದ್ಯರು ಅದರಲ್ಲಿ ಗಾಯಾಳು  ಹೇಳಿಕೆ ಸ್ಥಿತಿಯಲ್ಲಿ ಇಲ್ಲ ಎಂದು ಹಿಂಬರಹವನ್ನು ಮಾಡಿದ್ದಾರೆ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ನಾನು ಆಸ್ಪತ್ರೆಗೆ ಭೇಟಿ ನೀಡಿದಾಗ ಚಾಸಾ.1 ರವರು ಐ.ಸಿ.ಯು ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ನೀವು ಅಲ್ಲಿಗೆ ಹೋಗಿ ಗಾಯಾಳುವಿನ ಹೇಳಿಕೆಯನ್ನು ಪಡೆಯಲು ವೈದ್ಯರಿಂದ ಅನುಮತಿಯನ್ನು ಪಡೆದುಕೊಂಡರೇ ಎಂದರೆ ಸಾಕ್ಷಿ ನಾನು ಮೌಖಿಕವಾಗಿ ವೈದ್ಯರನ್ನು ಕೇಳಿದೆನು ಅವರು ಬಿಡುವುದಿಲ್ಲ ಎಂದು ಹೇಳಿದರು, ಆದರೆ ನಾನು

ಬಿಡಬೇಕು ಎಂದು ಕೇಳಿದಾಗ ಅವರು ಗಾಯಾಳುವಿನ ಹೇಳಿಕೆಯನ್ನು ಪಡೆಯಲು ಬಿಟ್ಟರು ಎನ್ನುತ್ತಾರೆ.

6. ಚಾಸಾ.1 ರವರು ಸಖರಾಯಪಟ್ಟಣದಲ್ಲಿ ರಾಜಕೀಯದಲ್ಲಿ ಗುರುತಿಸಿಕೊಂಡಿದ್ದರು ಎಂದರೆ ಸಾಕ್ಷಿ ಆಗ ತಾನೇ ನಾನು ಸಖರಾಯಪಟ್ಟಣ ಪೊಲೀಸ್ ಠಾಣೆಗೆ ಹೋಗಿದ್ದೆನು, ಹಾಗಾಗಿ ನನಗೆ ಮಾಹಿತಿ ಇರಲಿಲ್ಲ, ನಂತರದಲ್ಲಿ ಗೊತ್ತಾಯಿತು ಎನ್ನುತ್ತಾರೆ. ಚಾಸಾ.1 ರವರ ವಿರುದ್ಧ ನಿಮ್ಮ ಠಾಣೆಯಲ್ಲಿ ಹಲವಾರು ಪ್ರಕರಣಗಳು ಇವೆ ಎಂದರೆ ಸರಿ. ಚಾಸಾ.1 ರವರು ನಿಮ್ಮ ಠಾಣೆಯ ಮೇಲೆ ಪ್ರಭಾವವನ್ನು ಬೀರುವಂತಹ ವ್ಯಕ್ತಿಯಾಗಿದ್ದರಿಂದ ನೀವು ಆಸ್ಪತ್ರೆಯಿಂದ ಯಾವುದೇ ಎಂ.ಎಲ್.ಸಿ ಮಾಹಿತಿ ಬರುವ ಪೂರ್ವದಲ್ಲಿಯೇ ನೀವು ಆಸ್ಪತ್ರೆಗೆ ಭೇಟ ನೀಡಿ ಚಾಸಾ.1 ರವರು ಹೇಳಿಕೆಯನ್ನು ಕೊಡುವ ಸ್ಥಿತಿಯಲ್ಲಿ ಇಲ್ಲದಿದ್ದರೂ ಸಹ ಮೇಲಾಧಿಕಾರಿಗಳ ಮಾತನ್ನು ಕೇಳಿ ನಿಪಿ.20 ರಂತೆ ಸುಳ್ಳು ಹೇಳಿಕೆಯನ್ನು ತಯಾರಿಸಿದ್ದೀರಿ ಎಂದರೆ ಸರಿಯಲ್ಲ. ನೀವು ಭೇಟಿ ನೀಡಿದ್ದೀರಿ ಎನ್ನಲಾದ ಸಮಯದಲ್ಲಿ ಚಾಸಾ.1 ರವರು ಹೇಳಿಕೆ ನೀಡುವ ಸ್ಥಿತಿಯಲ್ಲಿ ಇರಲಿಲ್ಲ ಮತ್ತು ಆತ ನೀಮಗೆ ನಿಪಿ.20 ರಂತೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನೀವು ಹೇಳಿದಂತೆ ಯಾವುದೇ ಕರ್ತವ್ಯ ನಿರ್ವಹಿಸದಿದ್ದರೂ ಸಹ ಮೇಲಾಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

<u>ಸಾಕ್ಷಿಯ ಸಹಿ</u>